**ಸಾಕ್ಷಿಯನ್ನು ದಿನಾಂಕಃ 23.11.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಕೆ.ಸಿ.ಎಸ್ ವಕೀಲರಿಂದಃ**

ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾವು 03 ಜನ ಸಹೋದರರು ಇದ್ದು, ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದೇವೆ. ಈ ಹಿಂದೆ ನಮ್ಮ ತಂದೆಯ ಕುಟುಂಬದಲ್ಲಿ ಭಾಗವಾಗಿರುವುದಿಲ್ಲ ಎಂದು ನನ್ನ ತಂದೆ ಪ್ರತ್ಯೇಕ ಹಿಸ್ಸೆ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಈ ಪ್ರಕರಣದ ದಾವಾ ಸ್ವತ್ತನ್ನು ಸೇರಿಸಿರಲಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಈ ಹಿಂದೆ ನಾನು ಪ್ರತಿವಾದಿಗಳ ವಿರುದ್ಧ ಒಂದು ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಸತತವಾಗಿ ಗೈರು ಹಾಜರಾಗಿದ್ದರಿಂದ ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಸರಿ. ನನ್ನ ತಂದೆ ಮತ್ತು ನಮ್ಮ ಚಿಕ್ಕಪ್ಪ ರವರ ನಡುವೆ ಜಮೀನಿನ ವಿಚಾರವಾಗಿ ನ್ಯಾಯಾಲಯದಲ್ಲಿ ವಿಚಾರಣೆಗಾಗಿ ಬಾಕಿ ಇರುತ್ತವೆ ಎಂದರೆ ಸರಿ. ನಮ್ಮ ಕುಟುಂಬದವರು ನ್ಯಾಯಾಲಯದ ಕಲಾಪಗಳಲ್ಲಿ ಭಾಗವಹಿಸುವುದನ್ನೇ ಅಭ್ಯಾಸ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆದ್ದರಿಂದ ಯಾವ ಪ್ರಕರಣಗಳಲ್ಲಿಯೂ ನಮ್ಮ ಪರವಾಗಿ ತೀರ್ಪು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಚೆನ್ನೇಗೌಡ ಆಗಿದ್ದು, ಅವರಿಗೆ ಶಿವಣ್ಣ ಎಂಬ ಸಹೋದರರಿದ್ದು ಪ್ರಸ್ತುತ ಮೃತಪಟ್ಟಿರುತ್ತಾರೆ. ಸದರಿ ಶಿವಣ್ಣ ರವರಿಗೆ ಇಬ್ಬರು ಹೆಂಡತಿಯರಿರುತ್ತಾರೆ ಎಂದರೆ ಸರಿ. ಶಿವಣ್ಣ ರವರ 1 ನೇ ಹೆಂಡತಿಯ ಕುಟುಂಬದವರು ಯಾರು ಎಂದು ನನಗೆ ಗೊತ್ತಿಲ್ಲ. ಅದೆ ರೀತಿ ಪರಶಿವ ಮತ್ತು ಅವರ ಅಣ್ಣ ತಮ್ಮಂದಿರು ಯಾರು ಎಂದು ನನಗೆ ಗೊತ್ತಿಲ್ಲ. ಶಿವಣ್ಣ ರವರ ಮೊದಲನೇ ಹೆಂಡತಿ ಮತ್ತು ಅವರ ಮಕ್ಕಳು ಸೇರಿ ಹುಣಸೂರಿನ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾವಾ

ಸ್ವತ್ತನ್ನು ಸೇರಿಸಿ ಭಾಗಾಂಶಕ್ಕಾಗಿ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಪ್ರತಿವಾದಿಗಳು ಸಲ್ಲಿಸಿರುವ ತಕರಾರಿನ ವಿಷಯವನ್ನು ತಿಳಿದುಕೊಂಡಿರುತ್ತೇನೆ. ಸದರಿ ತಕರಾರಿನಲ್ಲಿ ಶಿವಣ್ಣ ರವರ 1 ನೇ ಹೆಂಡತಿ ಮತ್ತು ಅವರ ಮಕ್ಕಳು 1 ಮತ್ತು 2 ನೇ ಪ್ರತಿವಾದಿಗಳ ವಿರುದ್ಧ ಹುಣಸೂರು ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಸಲ್ಲಿಸಿದ ಮೂಲ ದಾವೆ ಸಂಖ್ಯೆ 94/2007 ರಾಜಿ ಮೂಲಕ ಮುಕ್ತಾಯಗೊಂಡಿರುತ್ತದೆ ಎಂದು ಬರೆಸಿರುತ್ತಾರೆಂದರೆ ಸರಿಯಲ್ಲ. ಸದರಿ ರಾಜಿ ಅರ್ಜಿಯಂತೆ ಆ ಪ್ರಕರಣದ ಪಕ್ಷಗಾರರು ದಿನಾಂಕಃ 01.10.2010 ರಂದು ಜನತಾ ನ್ಯಾಯಾಲಯದಲ್ಲಿ ರಾಜಿ ಮಾಡಿಕೊಂಡಿದ್ದು, ಅದರಂತೆ ಡಿಕ್ರಿಯೂ ಸಹ ಆಗಿರುತ್ತದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತಾಗಿದ್ದು, ನನ್ನ ತಂದೆ ಈ ಹಿಂದೆ ದಲ್ಲಾಳಿ ವ್ಯಾಪಾರದ ಜೊತೆಗೆ ಸೌದೆ ಒಡೆದು ಅದರಿಂದ ಬಂದ ಆದಾಯದಿಂದ ದಾವಾ ಸ್ವತ್ತನ್ನು ತೆಗೆದುಕೊಂಡಿರುತ್ತಾರೆ. ನಿಮ್ಮ ತಂದೆ ಯಾವ ದಾಖಲೆಯ ಮೂಲಕ ದಾವಾ ಸ್ವತ್ತನ್ನು ತೆಗೆದುಕೊಂಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಡಿಮ್ಯಾಂಡ್ ರಿಜಿಸ್ಟರ್ ಮೂಲಕ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಡಿಮ್ಯಾಂಡ್ ರಿಜಿಸ್ಟರ್ ನಂ. 180/1, 150/1 ಮತ್ತು 178/1 ಕ್ಕೆ ಸಂಬಂಧಿಸಿದಂತೆ ದಾವೆ ಸಲ್ಲಿಸಿರುತ್ತೇನೆ. ಈ ಮೇಲೆ ಹೇಳಿದ 3 ಡಿಮ್ಯಾಂಡ್ ರಿಜಿಸ್ಟರ್ ನಂಬರ್ ಗಳು ಒಂದೇ ಆಸ್ತಿಗೆ ಸಂಬಂಧಿಸಿರುತ್ತವೆ. ಡಿಮ್ಯಾಂಡ್ ರಿಜಿಸ್ಟರ್ ನಲ್ಲಿ ನನ್ನ ತಂದೆಯ ಹೆಸರನ್ನು ಯಾವ ದಾಖಲೆಯ ಆಧಾರದ ಮೇಲೆ ನಮೂದಿಸಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ನಿ.ಪಿ-1 ಅನ್ನು ಯಾವ ದಾಖಲೆಯ ಆಧಾರದ ಮೇಲೆ ನನ್ನ ತಂದೆಯ ಹೆಸರನ್ನು ನಮೂದಿಸಿರುತ್ತಾರೆಂದು ಬರೆದಿಲ್ಲ ಎಂದರೆ ಸರಿಯಲ್ಲ. ನಿ.ಪಿ-1 ರಲ್ಲಿ ಪೂರ್ವ-ಪಶ್ಚಿಮ-22 ಅಡಿ ಮತ್ತು

ದಕ್ಷಿಣೋತ್ತರ-70 ಅಡಿ ಎಂದು ನಮೂದಿಸಿಲ್ಲ ಆದರೆ ಅಸೆಸ್‌ಮೆಂಟ್ ರಿಜಿಸ್ಟರ್ ನಲ್ಲಿ ನಮೂದಿಸಿರುತ್ತಾರೆ. ನಿ.ಪಿ-2 ರಲ್ಲಿ ಜಂಜರ್ ನಂ.196, ಆಸ್ತಿ ಸಂಖ್ಯೆ 179/2 ಎಂದು ಬರೆದಿರುತ್ತಾರೆ ಎಂದರೆ ಸರಿ. ನಿ.ಪಿ-2 ರಲ್ಲಿ ನಮೂದಿಸಿರುವ ಆಸ್ತಿ ಮತ್ತು ದಾವಾ ಸ್ವತ್ತು ಎರಡು ಒಂದೇ ಆಗಿದ್ದು, ನಿ.ಪಿ-2 ರಲ್ಲಿ ನಮೂದಿಸಿರುವ ಈ ಮೇಲೆ ಹೇಳಿದ ಜಂಜರ್ ನಂಬರ್ ಮತ್ತು ಆಸ್ತಿ ಸಂಖ್ಯೆಗಳನ್ನು ವಾದಿ ಪತ್ರದಲ್ಲಿ ನಮೂದಿಸಿಲ್ಲ.

**ಈ ಹಂತದಲ್ಲಿ ಮಾನ್ಯ ಪ್ರತಿವಾದಿಗಳ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**